**3 ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.2856/2024 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | ಹನುಮಂತರಾಜು. |
| **ತಂದೆಯ ಹೆಸರು** | ವಿಶ್ವನಾಥ ಶೆಟ್ಟಿ. |
| **ವಯಸ್ಸು** | 50 ವರ್ಷ |
| **ಉದ್ಯೋಗ** | ಸಿನಿಯರ್ ಆರ್ಕಿಟೆಕ್ , ಬಾಷ್ ಕಂಪನಿ. |
| **ವಾಸ** | ಬಸವನಗುಡಿ, ಬೆಂಗಳೂರು |
| **ಪ್ರಮಾಣೀಕರಿಸಿದ ದಿನಾಂಕ** | 04.08.2026 |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆ:**

ನಾನು ದಿ.02.06.2014 ರಲ್ಲಿ ಬಾಷ್ ಕಂಪನಿಗೆ ಆರ್ಕಿಟೇಕ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನನ್ನನ್ನು ಕಂಪನಿಯವರು ಬಂದು ಒಂದೂವರೆ ತಿಂಗಳ ನಂತರ ಜರ್ಮನಿ, ಫ್ರಾನ್ಸ್ ದೇಶಗಳಿಗೆ ಕಳುಹಿಸಿ ಸದರಿ ದೇಶಗಳಿಂದ ಕಾರು ಕಂಪನಿಗಳಿಂದ ಪ್ರಾಜೆಕ್ಟ್ ಗಳನ್ನು ತರುವಂತೆ ನಿರ್ದೇಶನವನ್ನು ನೀಡಿರುತ್ತಾರೆ. ರೆನಾಲ್ಟ್ ಮತ್ತು ಫಿಜಿಯೋ ಕಂಪನಿಗಳಿಗೆ ನಮ್ಮ ಕಂಪನಿಯವರು ಅಭಿವೃದ್ಧಿ ಪಡಿಸಿರುವ ಟೂಲ್ಸ್ ಬಗ್ಗೆ ವಿವರಣೆ ನೀಡುವಂತೆ ನನ್ನನ್ನು ಕಳುಹಿಸಿರುತ್ತಾರೆ. ನಂತರ ರೆನಾಲ್ಟ್ ಮತ್ತು ಫಿಜಿಯೋ ಕಂಪನಿಯವರು ಒಂದೊಂದು ಪ್ರಾಜೆಕ್ಟ್ ಗಳನ್ನು ಕೊಟ್ಟಿರುತ್ತಾರೆ. ಆದರೆ ನಮ್ಮ ದೇಶಗಳಿಂದ ಸದರಿ ದೇಶಗಳಿಗೆ ಹೋಗಿರುವ ಕಂಪನಿಯ ನೌಕರರು ನನ್ನ ಹೆಸರನ್ನು ಹಾಳು ಮಾಡುವ ಉದ್ದೇಶದಿಂದ ಸದರಿ ಪ್ರಾಜೆಕ್ಟ್ ಗಳನ್ನು ರದ್ದುಪಡಿಸಿರುತ್ತಾರೆ.

2. ಸದರಿ ನಮ್ಮ ಬಾಷ್ ಕಂಪನಿಯವರು ನನ್ನ ಕೆಲಸದ ಕೌಶಲ್ಯತೆಯನ್ನು ನೋಡಿ ನನ್ನನ್ನು ಜಪಾನ್ ಮತ್ತು ಯೂರೋಪ್ ಕ್ಲೈಂಟ್ಸ್‌ಗಳಿಗೆ ಪ್ರಾಜೆಕ್ಟ್ ಇನ್ ಚಾರ್ಜ್ ಆಗಿ ನೇಮಕ ಮಾಡಿರುತ್ತಾರೆ. ನಂತರ ನಮ್ಮ ಕಂಪನಿಯಿಂದ 2016 ರಲ್ಲಿ ಸಿನಿಯರ್ ಆರ್ಕಿಟೇಕ್ ಆಗಿ ಪ್ರಮೋಷನ್ ಕೊಟ್ಟು ಜರ್ಮನಿ ದೇಶಕ್ಕೆ ಕಳುಹಿಸಿರುತ್ತಾರೆ. ಅಲ್ಲಿ ನನಗೆ ವರ್ಷದಿಂದ ವರ್ಷಕ್ಕೆ ಅಪ್ರೆಜಲ್ ನ್ನು ಮಾಡುತ್ತಿದ್ದರು. ನನ್ನನ್ನು ಜರ್ಮನಿಯ ಕಂಪನಿಯ ಹಳೆಯ ಮ್ಯಾನೇಜರ್ ರವರು ಪ್ರಮೋಷನ್

ನಾಮಿನಿ ಮಾಡಿ ಹೊರಟುಹೋಗಿರುತ್ತಾರೆ. ಆದರೆ ಭಾರತ ದೇಶದ 9 ನೇ ಆರೋಪಿ ಸುರೇಶ್ ಆಗಸ್ಟೀನ್ ರವರು ಸದರಿ ನಾಮಿನಿಯನ್ನು ರದ್ದು ಮಾಡಿ ಅವರಿಗೆ ಬೇಕಾದವರಿಗೆ ನಾಮಿನಿ ನೀಡಿರುತ್ತಾರೆ. ಇದಾದ ಒಂದು ವರ್ಷದ ನಂತರ ನಾಮಿನಿ ಮಾಡಿರುತ್ತಾರೆ. ಪ್ರಮೋಷನ್ ಗೆ 50 ಜನರನ್ನು ನೇಮಕ ಮಾಡಲು ಕಳುಹಿಸಿದರೇ, ಅದರಲ್ಲಿ ಇಬ್ಬರನ್ನು ಮಾತ್ರ ನೇಮಕ ಮಾಡಿರುತ್ತಾರೆ. ಸದರಿ ಇಬ್ಬರನ್ನು ನಾನು ಒಬ್ಬನು ಸಹ ಆಗಿರುತ್ತೇನೆ. ನಂತರ ನಮ್ಮ ಭಾರತ ದೇಶದ ಬಾಷ್ ಕಂಪನಿಯವರು ನಿನಗೆ ಪ್ರಮೋಷನ್ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ. ಎರಡು ದಿನಗಳ ನಂತರ ಭಾರತ ದೇಶದಿಂದ ನನಗೆ ಇಮೇಲ್ ಬಂದಿದ್ದು ನಾನು ಪಾಸ್ ಆಗಿರುವುದಿಲ್ಲಎಂದು ಕಳುಹಿಸಿರುತ್ತಾರೆ. ಅದನ್ನು ನಾನು ಪ್ರಶ್ನಿಸಿದಕ್ಕೆ ನಮ್ಮ ಬಾಷ್ ಕಂಪನಿಯಿಂದ ನನಗೆ ತುಂಬಾ ನೀಡಿರುತ್ತಾರೆ. ನನ್ನ ಮಕ್ಕಳು ಜರ್ಮನಿ ದೇಶದಲ್ಲಿ ಓದುತ್ತಿದ್ದಾಗ , ನಮ್ಮ ಕಂಪನಿಯವರು ನನ್ನ ಎಲ್ಲಾ ಕಂಟ್ರ್ಯಾಕ್ಟ್ ಗಳನ್ನು ರದ್ದು ಮಾಡಿ ನನ್ನನ್ನು ಭಾರತ ದೇಶಕ್ಕೆ ಬರುವಂತೆ ಮಾಡಿ ನನ್ನ ಮಕ್ಕಳ ವಿದ್ಯಾಭ್ಯಾಸವನ್ನು ಹಾಳು ಮಾಡಿರುತ್ತಾರೆ. ನಾನು ಭಾರತಕ್ಕೆ ಬಂದ ನಂತರ ನನ್ನ ನಾಲ್ಕು ತಿಂಗಳ ಸಂಬಳವನ್ನು ಕೊಟ್ಟಿರುವುದಿಲ್ಲಮತ್ತು ನನ್ನನ್ನು ಯಾವುದೇ ಪ್ರಾಜೆಕ್ಟ್ ಗಳನ್ನು ಸಹ ಕೊಟ್ಟಿರುವುದಿಲ್ಲ. ಅಲ್ಲದೇ ನನಗೆ ಯಾವುದೇ ಕಂಪ್ಯೂಟರ್ ಆಕ್ಸಿಸ್ ಗಳನ್ನು ಕೊಡಲಿಲ್ಲ. ನಾನು ಭಾರತ ದೇಶಕ್ಕೆ ಬಂದ ಮೂರು ತಿಂಗಳ ನಂತರ ನನಗೆ ಕಂಪ್ಯೂಟರ್ ಆಕ್ಸಿಸ್ ಗಳನ್ನು ಕೊಟ್ಟಿರುತ್ತಾರೆ. ಅದನ್ನು ನಾನು ಪರಿಶೀಲನೆ ಮಾಡಿದಾಗ 2014 ರಿಂದ 2020 ನನ್ನ ಎಲ್ಲಾ ಮಾಹಿತಿಗಳನ್ನು ನಾಶಪಡಿಸಿರುತ್ತಾರೆ.

3. ಬಾಷ್ ಕಂಪನಿಯಿಂದ ಪ್ರತಿಯೊಬ್ಬ ನೌಕರನಿಗೆ ಪಿಎಫ್ ರೂ.25,000/- ಹಣ ನಿಗದಿಯಾಗಿರುತ್ತದೆ. ಆದರೆ ಕಂಪನಿಯಿಂದ ನನಗೆ ಕೇಲವ ರೂ.300 ಅಥವಾ 400/- ಗಳನ್ನು ಹಾಕಿರುತ್ತಾರೆ. ಅದನ್ನು ಸಹ ಕೇವಲ 2019 ರಲ್ಲಿ ಐದು ತಿಂಗಳು, 2020 ರಲ್ಲಿ ಒಂದು ತಿಂಗಳು, 2021 ರಲ್ಲಿ 9 ತಿಂಗಳು, 2022 ರಲ್ಲಿ 9 ತಿಂಗಳುಗಳು ಮಾತ್ರ ಕೊಟ್ಟಿರುತ್ತಾರೆ. ಇದನ್ನು ನಾನು ಪಿಎಫ್ ಕಛೇರಿಯಲ್ಲಿ ಪರಿಶೀಲನೆ ಮಾಡಿದಾಗ ನಿಮ್ಮ ಕಂಪನಿಯವರನ್ನು ಕೇಳಿ ಎಂದು ಹೇಳಿರುತ್ತಾರೆ. 2016 ರಿಂದ 2021 ರ ವರೆಗೆ ನನಗೆ ಕಂಪನಿಯವರು ಫಾರಂ ನಂ.16 ನ್ನು ನೀಡಿರುವುದಿಲ್ಲ ಹಾಗೂ

2021 ಏಪ್ರಿಲ್ , ಮೇ ಮತ್ತುಜೂನ್ ತಿಂಗಳಗಳ ಟೇಕ್ ಹೋಮ್ ಸ್ಯಾಲರಿಯನ್ನು ಇಲ್ಲ ಎಂದು ತೋರಿಸಿರುತ್ತಾರೆ. ಜುಲೈ 2021 ರ ವೇತನ ಪ್ರಮಾಣ ಪತ್ರದಲ್ಲಿ ಒಂದು ತಿಂಗಳ ಸ್ಯಾಲರಿ ರೂ.21 ಲಕ್ಷ ಎಂದು ತೋರಿಸಿರುತ್ತಾರೆ. ಆದರೆ ರೂ.21 ಲಕ್ಷ ಹಣ ನನಗೆ ಕೊಟ್ಟಿರುವುದಿಲ್ಲ. 2021 ರ ಫಾರಂ ನಂ.16 ಎಕ್ಸ್ ಪೇರಿಯಾಗಿರುತ್ತದೆ . ಸದರಿ ಎಕ್ಸ್ ಪೇರಿಯಾಗಿರುವ ಫಾರಂ.16 ನ್ನು ಬಾಷ್ ಕಂಪನಿಯವರು ತಿದ್ದುಪಡಿ ಮಾಡಿರುತ್ತಾರೆ. ಇದಾದ ನಂತರ ನನಗೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬಂದಿರುತ್ತದೆ. ಸದರಿ ನೋಟಿಸ್ ನ್ನು ಪರಿಶೀಲನೆ ಮಾಡಿದಾಗ ಸದರಿ ನೋಟಿಸ್ ದಿ.14.05.2025 ರಂದು ನಮೂದಾಗಿರುತ್ತದೆ. ಸದರಿ ನೋಟಿಸ್ ಕೊಡಲು ನನಗೆ ದಿ.24.03.2025 ಯನ್ನು ನಿಗದಿಮಾಡಿರುತ್ತಾರೆ. 2024-2025 ರಲ್ಲಿ ಫಾರಂ.16 ರಲ್ಲಿ ನನಗೆ ರೂ.49 ಲಕ್ಷ ಕೊಟ್ಟಿರುವಂತೆ ಬಾಷ್ ಕಂಪನಿಯವರು ತೋರಿಸಿರುತ್ತಾರೆ. ಆದರೆ ನನ್ನ ಅಕೌಂಟ್ ನಲ್ಲಿ ರೂ.16 ಲಕ್ಷ ಮಾತ್ರ ಬಂದಿರುತ್ತದೆ. ಸಾಮಾನ್ಯವಾಗಿ ಬೇರೆ ನೌಕರರಿಗೆ ಒಂದು ವರ್ಷಕ್ಕೆ ಒಂದು ಅಪ್ರೇಜಲ್ ಕೊಡುತ್ತಾರೆ. ಆದರೆ ನನಗೆ ಒಂದೂವರೆ ವರ್ಷಕ್ಕೆ ಮತ್ತು ಎರಡು ವರ್ಷಗಳಿಗೊಮ್ಮೆ ಕೊಟ್ಟಿರುತ್ತಾರೆ.

4. ಇದಾದ ನಂತರ ನಾನು ಕಂಪನಿಯವರನ್ನು ಪ್ರಶ್ನಿಸಿದಾಗ ನನ್ನ 10 ವರ್ಷಗಳ ಅನುಭವದ ಪ್ರಮಾಣ ಪತ್ರವನ್ನು ನೀಡಿ ಎಂದು ಕೇಳಿದಕ್ಕೆ ಕಂಪನಿಯವರು ಕೇವಲ ಒಂದು ಪುಟದಲ್ಲಿ ನನ್ನ ವಿದ್ಯಾರ್ಹತೆಯನ್ನು ನೀಡಿರುತ್ತಾರೆ. ಅದಕ್ಕಿಂತ ಮುಂಚೆ ಕಂಪನಿಯಿಂದ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿ ದಿ.24.11.2023 ರಲ್ಲಿ ಒಂದು ಸಭೆ ಮಾಡಿರುತ್ತಾರೆ. ಸದರಿ ಸಭೆಯಲ್ಲಿ ನನ್ನ ಉಳಿಕೆ ಸೇವಾ ಅವಧಿಗೆ ಒಂದೇ ಬಾರಿ ಪರಿಹಾರವನ್ನು ಕೊಡಲು ನಿರ್ಧಾರ ಮಾಡಿರುತ್ತಾರೆ. ನನ್ನ ಉಳಿದ ಸೇವಾ ಅವಧಿಯ ಪರಿಹಾರವನ್ನು ಲೆಕ್ಕ ಹಾಕಿದರೇ ಒಟ್ಟು ರೂ.5 ಕೋಟಿ ಬರುತ್ತದೆ. ಆದರೆ ಕಂಪನಿಯವರು ನನಗೆ ಕೇವಲ ರೂ.36 ಲಕ್ಷ ಹಣ ಕೊಡಲು ನಿರ್ಧಾರ ಮಾಡಿರುತ್ತಾರೆ. ಆದರೆ ನಾನು ಅದಕ್ಕೆ ಒಪ್ಪಿಕೊಂಡಿರುವುದಿಲ್ಲ. ದಿ.30.11.2023 ರಲ್ಲಿ ನನಗೆ ಏನು ಕೆಲಸ ಮಾಡಿಲ್ಲ ಎಂದು ಷೋಕಾಸ್ ನೋಟಿಸ್ ನೀಡಿರುತ್ತಾರೆ . ಆದರೆ ಸದರಿ ಷೋ ಕಾಸ್ ನೋಟಿಸ್ ನಲ್ಲಿ ಯಾವ

ವರ್ಷ ಎಂದು ನಮೂದು ಮಾಡಿರುವುದಿಲ್ಲ. ಇದಾದ ನಂತರ ನಾನು ಕಂಪನಿಯಿಂದ ಹೊರಗಡೆ ಹೋಗದೆ ಇದುದ್ದರಿಂದ ನನಗೆ ಕಂಪನಿಯಿಂದ ವಿಚಾರಣೆಗೆ ನನ್ನನ್ನು ನಿಗದಿ ಮಾಡಿರುತ್ತಾರೆ. ಸದರಿ ವಿಚಾರಣೆಯ ಪತ್ರವೂ ಖಾಲಿ ಕಾಗದವಾಗಿದ್ದು ಅದನ್ನು ಇಟ್ಟುಕೊಟ್ಟು ನನ್ನನ್ನು 370 ದಿನ ವಿಚಾರಣೆ ಮಾಡಿರುತ್ತಾರೆ. ಆದರೆ ವಿಚಾರಣೆ ಕೇವಲ ಶೇ.10 ರಷ್ಟು ಮಾತ್ರ ಮಾಡಿರುತ್ತಾರೆ. ನಾನು ಯಾವುದೇ ತಪ್ಪು ಮಾಡದೆ ಇದ್ದರೂ ಸಹ ನನಗೆ ಪರಿಹಾರದ ಹಣ ಕೊಡಲು ತಿಳಿಸಿರುತ್ತಾರೆ. ನನ್ನನ್ನು ಏನಾದರೂ ಮಾಡಿ ಕೆಲಸದಿಂದ ತೆಗೆಯಬೇಕು ಎಂದು ನಿರ್ಧಾರ ಮಾಡಿ ಒಂದನೇ ಆರೋಪಿರಿಂದ 18 ನೇ ಆರೋಪಿತರು ಒಳಸಂಚು ಮಾಡಿರುತ್ತಾರೆ.

5. ಈ ಹಿಂದೆ ಇದ್ದ ಹೆಚ್ ಆರ್ ರವರು ನನ್ನ ಬಗ್ಗೆ ಮಾಹಿತಿ ತೆಗೆದುಕೊಂಡಿರುತ್ತಾರೆ. ಆ ಸಂಬಂಧ ನನಗೆ ದಾಖಲೆಯನ್ನು ಕೊಡಿ ಎಂದು ಕೇಳಿದಾಗ ಶಿವರಾಮ ಕೃಷ್ಣ ರವರು ಅದು ಎಲ್ಲಿ ಇದೆಯೋ ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಇದಾದ ನಂತರ ಸದರಿ ಬಾಷ್ ಕಂಪನಿಯ ಡೈರೆಕ್ಟರ್ ಆಫ್ ಹೆಚ್ ಆರ್ ಆದ ರಾಹುಲ್ ಅತ್ತುಲ್ ಗ್ರುಜಲ್ ರವರು ನನ್ನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ ಮತ್ತು ನನ್ನ ವಿರುದ್ದ ಇಲ್ಲ ಸಲ್ಲದ ಆರೋಪಗಳನ್ನು ಹೇಳಿ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ದ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಸದರಿ ಕೇಸಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವೂ ತಡೆಯಾಜ್ಞೆ ನೀಡಿರುತ್ತದೆ. ಆರೋಪಿತರು ಮತ್ತು ಕಂಪನಿಯವರು ನಾನು ಯಾವುದೇ ರಾಜೀನಾಮೆ ಯನ್ನು ನೀಡದೇ ಇದ್ದರೂ ಸಹ ನಾನು ರಾಜೀನಾಮೆಯನ್ನು ಕೊಟ್ಟಿರುವಂತೆ ಸೃಷ್ಟಿ ಮಾಡಿರುತ್ತಾರೆ. ನಂತರ ಕಂಪನಿಯವರು ನನ್ನ ನಿವೃತ್ತಿ ವೇತನ ಬಗ್ಗೆ ಸ್ಟೇಟ್ ಮೆಂಟ್ ಕೇಳಿದರು ಸಹ ಯಾವುದೇ ನಿವೃತ್ತಿ ವೇತನ ಮಾಹಿತಿಯನ್ನು ನೀಡಿರುವುದಿಲ್ಲ. ಇದರಿಂದ ನಾನು ಬೇರೆ ಕಂಪನಿಗೆ ಕೆಲಸಕ್ಕೆ ಸೇರಿಕೊಳ್ಳಲು ಮತ್ತು ಜೀವನೋಪಾಯನ್ನು ಕಂಡು ಕೊಳ್ಳಲು ಬಹಳ ಕಷ್ಟಕರವಾಗಿದೆ.

6. ಸದರಿ ಬಾಷ್ ಕಂಪನಿಯವರು ಅಂದರೆ ಒಂದರಿಂದ 18 ನೇ ಆರೋಪಿತರ ಈ ಕೃತ್ಯದಿಂದ ನನ್ನ 10 ವರ್ಷದ ಸೇವಾ ಅನುಭವ ಮತ್ತು ಮುಂದಿನ ಭವಿಷ್ಯದ 10 ವರ್ಷದ ಸೇವಾ ಅವಧಿಗಳನ್ನು ನಾಶ ಮಾಡಿರುತ್ತಾರೆ. ಇದರಿಂದ ನನಗೆ ಒಂದೂವರೆ ವರ್ಷಗಳಿಂದ ಯಾವುದೇ ಕೆಲಸ

ಇಲ್ಲ ಮತ್ತು ನನ್ನ ಜೀವನ ಕಷ್ಟಕರವಾಗಿದೆ. ನನ್ನ ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲದಂತಾಗಿದೆ. ಅಲ್ಲದೇ ಅರೋಪಿತರು ನನಗೆ ನಂಬಿಕೆ ದ್ರೋಹ ಮತ್ತು ಮೋಸ ಉಂಟು ಮಾಡಿರುತ್ತಾರೆ. ಅದುದರಿಂದ ಆರೋಪಿತರ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

***ಮುಂದುವರೆದ ಸತ್ಯಪ್ರಮಾಣ ಹೇಳಿಕೆಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**